ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ,
ಬಾಗಲಕೋಟೆ-02

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, Navanagar, Bagalkot-02

Tel: 08354/297330, Mob No 9449877676
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರ.ಸಂ:ಬಜಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2019-20/ 14201-14206 ದಿನಾಂಕ: 20 FEB 2020

ಪೀಠಿಕೆ:

ದಿನಾಂಕ: 11.02.2020 ರಂದು ಮದ್ಯಾಹ್ನ 03.00 ಘಂಟೆಗೆ ಶ್ರೀ ಕಾಶಿನಾಥ ಜಿ ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು:1) ಶ್ರೀಮತಿ: ಎಸ್.ಜಿ ಹಿರೇಮನಿ, ಉಪಲೆಕ್ಕನಿಯಂತ್ರಣಾಧಿಕಾರಿ, ಕಾ ಮತ್ತು ಪಾ ವೃತ್ತ ಹೆಸ್ಕಾಂ, ಬಾಗಲಕೋಟ.
2) ಶ್ರೀ ಚಂದ್ರಶೇಖರ ವ್ಹಿ. ಶಿವಪೂಜಿ. ಹಾಗೂ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸದಸ್ಯರು, ಬಾಗಲಕೋಟ.
3) ಶ್ರೀ ವ್ಹಾಯ್ ಎನ್ ಶಿಪ್ಪರಮಟ್ಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಲೋಕಾಪೂರ.
4) ಶ್ರೀ ಕರನಸಿಂಗ್ ಶಿವಸಿಂಗ್ ರಜಪೂತ, ಸಾ॥ ಲೋಕಾಪೂ, ಇವರ ಪರವಾಗಿ ಶ್ರೀ ರಂಗನಾಥ ಮ ಪಾಡಮುಖೆ, ಬಾಗಲಕೋಟ.

ಪ್ರಕರಣ ಸಂಖ್ಯೆ: 05/2019

ಕರನಸಿಂಗ್ ಶಿವಸಿಂಗ್ ರಜಪೂತ, ಸಾ॥ ಲೋಕಾಪೂರ,
ಇವರ ಪರವಾಗಿ ಶ್ರೀ ರಂಗನಾಥ ಮ ಪಾಡಮುಖೆ, ಬಾಗಲಕೋಟ. ---------ದೂರುದಾರರು.
ಪ್ರತಿನಿಧಿ:

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಹುವಿಸಕಂನಿ., --------- ಪ್ರತಿವಾದಿ
ಲೋಕಾಪೂರ.

ವಿಷಯ: ಪ್ರಕರಣ ಸಂಖ್ಯೆ: 05/2019 ರ ನಿಗದಿತ ಅವಧಿಯಲ್ಲಿ ವಿದ್ಯುತ್ ಸೌಕರ್ಯ ನೀಡದಿರುವ ಕುರಿತು.

*&*&*

ಪ್ರಕರಣ ಸಂಖ್ಯೆ: 05/2019 ಕ್ಕೆ ಸಂಬಂಧಿಸಿದಂತೆ, ದಿನಾಂಕ: 11.02.2020 ರಂದು ಮದ್ಯಾಹ್ನ 03.00 ಘಂಟೆಗೆ ಶ್ರೀ **ಕಾಶಿನಾಥ ಜಿ ಹಿರೇಮಠ**, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

1) ಶ್ರೀ ವ್ಹಾಯ್ ಎನ್ ಶಿಪ್ಪರಮಟ್ಟಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಲೋಕಾಪೂರ ರವರು ಸಭೆಗೆ ಹಾಜರಾಗಿರುತ್ತಾರೆ ಅವರ ಲಿಖಿತ ಹೇಳಿಕೆ.

ಪತ್ರ ಸಂಖ್ಯೆ:1947-48 ದಿನಾಂಕ:23.01.2020. ರಲ್ಲಿ ಶ್ರೀ ಕರನಸಿಂಗ್ ಶಿವನಸಿಂಗ್ ರಜಪೂತ, ಸಾ॥ ಲೋಕಾಪೂರ ಇವರು ನೂತನವಾಗಿ ನಿರ್ಮಿಸಿದ 3 ಮನೆಗಳಿಗೆ ವಿದ್ಯುತ್ ಒದಗಿಸಲು ಈ ಕಛೇರಿಗೆ ದಿನಾಂಕ:19.11.2019 ರಂದು ಆರ್.ಆರ್.ಕಡತಗಳನ್ನು ಸಲ್ಲಿಸಿರುತ್ತಾರೆ. ಹಾಗೂ ಸದರಿ ಕಡತಗಳ ಜೊತೆಗೆ ತಮ್ಮ ಮಾಲಿಕತ್ವದ ರುಜುವಾತು ಪಡಿಸುವ ಉತಾರ (ಆರ್.ಸಿ) ಮತ್ತು ನಿರಪೇಕ್ಷಣಾ ಪ್ರಮಾಣ ಪತ್ರ(ಎನ್.ಓ.ಸಿ) ಪತ್ರವನ್ನು ಸಲ್ಲಿಸಿರುವದಿಲ್ಲ. ಸದರಿ ವಿಷಯವಾಗಿ ದಾಖಲೆಗಳನ್ನು ಸಲ್ಲಿಸಲು ಸೂಚಿಸಿ ದಿನಾಂಕ:20.11.2019 ರಂದು ಪತ್ರ ಬರೆಯಲಾಗಿದೆ. ಆದರೆ ಇಂದಿನವರೆಗೂ ಯಾವುದೇ ದಾಖಲೆಗಳನ್ನು ಸಲ್ಲಿಸಿರುವದಿಲ್ಲ. ಮುಂದುವರೆದು ಸದರಿಯವರ ಸ್ಥಳ ಪರಿಶೀಲನೆಗೆ ಹೋದಾಗ ಬಿನ್‌ಶೆತ್ಕಿ ರಿ.ಸ.ನಂ125 ರಲ್ಲಿಯ ಜಾಗೆಯ ಎಎಲ್‌ಎನ್‌ಅ/ಸಿಆರ್-18/98-99 ದಿನಾಂಕ:08.04.1999 ರದ್ದಾಗಿರುವದು ಕಂಡುಬರುತ್ತದೆ. ಹಾಗೂ ಸದರಿ ಜಾಗೆಯ ಬಗ್ಗೆ ಮಾನ್ಯ ಹೈಕೋರ್ಟ ಧಾರವಾಡ ಬೆಂಚಿನಲ್ಲಿ ದಾವೆ ಇರುವದು. ಕಾರಣ ಸದರಿಯವರು ನೀಡಿರುವ ಆರ್.ಆರ್.ಕಡತಗಳನ್ನು ಈ ಕಛೇರಿಯಿಂದ ನೋಂದಣಿ ಮಾಡಿರುವದಿಲ್ಲ ಮತ್ತು ಯಾವುದೇ ಪ್ರಕ್ರಿಯೆಗೊಂಡಿರುವದಿಲ್ಲ. ಹಾಗೂ ಎನ್.ಎ ರದ್ದು ಆಗಿರುತ್ತದೆ ಎಂದು ತಿಳಿಸಿದರು. ಆದೇಶದ ಪ್ರತಿಯನ್ನು ಸಭೆಯಲ್ಲಿ ಹಾಜರುಪಡಿಸಿದರು.

**ಶ್ರೀ ಕರನಸಿಂಗ್ ಶಿವಸಿಂಗ್ ರಜಪೂತ, ಸಾ॥ ಲೋಕಾಪೂ, ಇವರ ಪರವಾಗಿ ಶ್ರೀ ರಂಗನಾಥ ಮ ಪಾಡಮುಖೆ, ಬಾಗಲಕೋಟ ರವರ ಲಿಖಿತ ಹೇಳಿಕೆಯ ಮುಖ್ಯಾಂಶ :**

- ಮನೆ ಉತಾರ ಹಾಗೂ ಎನ್.ಓ.ಸಿ ನೀಡಲು ಒಪ್ಪಿಕೊಂಡಿರುತ್ತಾರೆ.

- ಮೇಲಿನ ಅಂಶಗಳ ಮೇಲೆ ಅಧ್ಯಕ್ಷರ ಹೇಳಿಕೆ:– ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಲೋಕಪೂರ ಇವರಿಗೆ ಗ್ರಾಹಕರಿಂದ ಉತಾರೆ ಹಾಗೂ ಎನ್.ಓ.ಸಿ ಹಾಗೊ ಇತರೆ ದಾಖಲೆಗಳನ್ನು ಪಡೆದುಕೊಂಡು ನಿಗಮದ ನಿಯಮಾನುಸಾರ ವಿದ್ಯುತ್ ಸಂಪರ್ಕ ನೀಡಲು ಕ್ರಮಕೈಕೊಳ್ಳಲು ತಿಳಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ.

## ಆ ದೇ ಶ

ಕ್ರ.ಸಂ:ಬಜಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2018-19/ 14201-14206 ದಿನಾಂಕ 20 FEB 2020

ಮೇಲಿನ ಅಂಶಗಳನ್ನು ಪರಿಶೀಲಿಸಿ, ಗ್ರಾಹಕರಿಂದ ಉತಾರೆ ಹಾಗೂ ಎನ್.ಓ.ಸಿ ಹಾಗೂ ಇತರೆ ದಾಖಲೆಗಳನ್ನು ಪಡೆದುಕೊಂಡು ನಿಗಮದ ನಿಯಮಾನುಸಾರ ವಿದ್ಯುತ್ ಸಂಪರ್ಕ ನೀಡಲು ಕ್ರಮಕೈಕೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಲೋಕಾಪೂರ ಇವರಿಗೆ ಸೂಚಿಸಿ, ಪ್ರಕರಣ ಮುಕ್ತಾಯಗೊಳಿಸಲಾಯಿತು.

ಸಹಿ/- 20/2
ಶ್ರೀಮತಿ ಸರೋಜಿನಿ ಜಿ. ಹಿರೇಮನಿ
ಉಪ-ಲೆಕ್ಕನಿಯಂತ್ರಣಾಧಿಕಾರಿ, ಹಾಗೂ
ಗ್ರಾ.ಕುಂ.ಕೊ.ನಿ.ವೇದಿಕೆಯ ಸದಸ್ಯರು,
ಬಾಗಲಕೋಟ

ಸಹಿ/-
ಶ್ರೀ ಚಂದ್ರಶೇಖರ ವ್ಹಿ. ಶಿವಪೂಜಿ
ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ
ಸದಸ್ಯರು, ಬಾಗಲಕೋಟ

ಸಹಿ/- 20/2
ಅಧ್ಯಕ್ಷರು
(ಕೆ ಜಿ ಹಿರೇಮಠ.)
ಅಧೀಕ್ಷಕ ಅಭಿಯಂತರರು(ವಿ)ಬಾಗಲಕೋಟ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟ.

ಪ್ರತಿಯನ್ನು:

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಮುಧೋಳ ರವರ ಮಾಹಿತಿಗಾಗಿ. .
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಲೋಕಾಪೂರ ರವರ ಮಾಹಿತಿಗಾಗಿ.
5) ಶ್ರೀ ಕರನಸಿಂಗ್ ಶಿವಸಿಂಗ್ ರಜಪೂತ, ಸಾ॥ ಲೋಕಾಪೂರ.
6) ಶ್ರೀ ರಂಗನಾಥ ಮ ಪಾಡಮುಖೆ, ಬಾಗಲಕೋಟ ಮಾಹಿತಿಗಾಗಿ .

ಕಛೇರಿ ಪ್ರತಿ/ಪ್ರಧಾನ ಕಡತ.